ದಿನಾಂಕ 15.07.2021 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**<u>ಮುಂದುವರೆದ ಪಾಟೀಸವಾಲು : ಶ್ರೀ ಎಸ್.ವಿ.ಎಂ. ವಕೀಲರಿಂದಃ</u>**

**1.** ನಾನ್ನ ತಂದೆ ಜಿಲ್ಲಾ ಪಂಚಾಯತಿ ಸದಸ್ಯರಾಗಿದ್ದರು ಎಂದರೆ ಸರಿ. ನನ್ನ ತಂದೆ ಸಮಾಜದಲ್ಲಿ ಅತ್ಯಂತ ಗೌರವಾನ್ವಿತ ವ್ಯಕ್ತಿ ಹಾಗೂ ಪ್ರಭಾವಿಯಾಗಿದ್ದರು ಎಂದರೆ ಸರಿ. ನನ್ನ ತಂದೆ ಲೇವಾದೇವಿ ವ್ಯವಹಾರ ಮಾಡುತ್ತಿದ್ದರು ಎಂದರೆ ಪ್ರೊ-ನೋಟ್ ಆಧಾರದ ಮೇಲೆ ಮಾಡುತ್ತಿದ್ದರು. ನನ್ನ ತಂದೆ ಸಾಲದ ಭದ್ರತೆಗಾಗಿ ಸಾಲಗಾರರ ಜಮೀನುಗಳನ್ನು ನಾಮಮಾತ್ರ ಕ್ರಯಪತ್ರದ ಮೂಲಕ ಬರೆಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಮೃತ 26ನೇ ಪ್ರತಿವಾದಿ ಇವರು ದಾವಾ ಐಟಂ ನಂ. 48, ಎ ಷಡ್ಯೂಲಿನ ಸ್ವತ್ತನ್ನು ಆಧಾರ ಮಾಡಿ ಸಾಲ ಪಡೆದು ದಿನಾಂಕ 08.07.1996 ರಂದು ನಾಮಮಾತ್ರದ ಕ್ರಯಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಸ್ವಾಧೀನದಲ್ಲಿ 26ನೇ ಪ್ರತಿವಾದಿಯ ನಂತರ ಆತನ ವಾರಸುದಾರರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 26ನೇ ಪ್ರತಿವಾದಿಯು ತಾನು ಪಡೆದಿದ್ದ ಸಾಲವನ್ನು ನನ್ನ ತಂದೆಯವರಿಗೆ ದಿನಾಂಕ 01.06.2004 ರಂದು ನನ್ನ ಹಾಗೂ 1ನೇ ಪ್ರತಿವಾದಿಯ ಸುಮಕ್ಷಮ ತೀರುವಳಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಲ ತೀರಿಸಿದ ನಂತರ ಜಮೀನನ್ನು ಮರುಕ್ರಯ ಮಾಡಲು 26ನೇ ಪ್ರತಿವಾದಿಯು ನನ್ನ ತಂದೆಯವರನ್ನು ಕೇಳಿದ್ದು, ನನ್ನ ತಂದೆಯವರು ಒಪ್ಪಿದ್ದು, ನಂತರ ಅವರು ಅನಾರೋಗ್ಯಕ್ಕೆ ಒಳಗಾದ ಕಾರಣ ಮರುಕ್ರಯ ಮಾಡಲು ಸಾಧ್ಯವಾಗಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ತೀರಿಕೊಂಡ ನಂತರ 26ನೇ ಪ್ರತಿವಾದಿ ನನ್ನನ್ನು ಮತ್ತು ನನ್ನ ಅಣ್ಣನನ್ನು ಮರುಕ್ರಯಕ್ಕೆ ಕೇಳಿದ್ದು, ನಾನು ಸಹಕರಿಸದ ಕಾರಣ ನನ್ನ ಅಣ್ಣ ದಿನಾಂಕ 16.01.2006 ರಂದು ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರದಲ್ಲಿ ತೋರಿಸಿರುವ ಪ್ರತಿಫಲವನ್ನು ನನ್ನ ತಂದೆಯವರು ಪಡೆದುಕೊಂಡಿದ್ದು ಕ್ರಯಪತ್ರದಲ್ಲಿ ನೊಂದಣಿ ಸಲುವಾಗಿ ಆ ದಿನ ಕೊಡಲಾಗಿದೆ ಎಂದು ಉಲ್ಲೇಖಿಸಲಾಗಿದೆ ಎಂದರೆ ಸರಿಯಲ್ಲ.

**2.** 27 ಮತ್ತು 28ನೇ ಪ್ರತಿವಾದಿಗಳು ಹಾಗೂ ಅವರ ಪೂರ್ವಜರು ನನ್ನ ತಂದೆಯವರ ಬಳಿ ರೂ. 8,000/- ಸಾಲ ಪಡೆದು ಸದರಿ ಸಾಲದ ಭದ್ರತೆಗಾಗಿ ದಾವಾ ಐಟಂ ನಂ. 49 ಮತ್ತು 50, ಎ

ಷಡ್ಯೂಲ್‌ನನ್ನು ದಿನಾಂಕ 12.05.1987 ರಲ್ಲಿ ನಾಮಮಾತ್ರದ ಕ್ರಯಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಸಾಲವನ್ನು ನನ್ನ ತಂದೆಯವರು ನನ್ನ ಮತ್ತು ನನ್ನ ಅಣ್ಣನ ಸಮಕ್ಷಮ 2000ನೇ ಸಾಲಿನಲ್ಲಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಮರುಕ್ರಯಕ್ಕೆ ಕೇಳಿದ್ದಾಗ ನನ್ನ ತಂದೆಯವರು ಒಪ್ಪಿದ್ದು ಅನಾರೋಗ್ಯದ ಕಾರಣ ಮಾಡಿಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಮರಣಾನಂತರ ನನಗೆ ಮತ್ತು ನನ್ನ ಅಣ್ಣನಿಗೆ ಮರುಕ್ರಯಕ್ಕೆ ಒತ್ತಾಯಿಸಿದ್ದು ನಾನು ಸಹಕರಿಸದ ಕಾರಣ 1ನೇ ಪ್ರತಿವಾದಿಯು ದಿನಾಂಕ 30.04.2005 ರಂದು ದಾವಾ ಐಟಂ 49ನ್ನು 27ನೇ ಪ್ರತಿವಾದಿಗೆ ಹಾಗೂ ದಿನಾಂಕ 14.09.2009 ರಂದು ದಾವಾ ಐಟಂ ನಂ. 50 ನ್ನು 28ನೇ ಪ್ರತಿವಾದಿಗೆ ಮರುಕ್ರಯ ಮಾಡಿದ್ದಾರೆ ಎಂದರೆ ಸರಿಯಲ್ಲ.

**3.** 2ನೇ ಪ್ರತಿವಾದಿ ನನ್ನ ತಂದೆಯವರ ಬಳಿ ಸಾಲ ಪಡೆದು ಸದರಿ ಸಾಲದ ಭದ್ರತೆಗಾಗಿ ತಮ್ಮ ಸ್ವತ್ತುಗಳನ್ನು ನಾಮಮಾತ್ರದ ಕ್ರಯಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಸಾಲವನ್ನು ನನ್ನ ತಂದೆಯವರು ನನ್ನ ಮತ್ತು ನನ್ನ ಅಣ್ಣನ ಸಮಕ್ಷಮ 2000ನೇ ಸಾಲಿನಲ್ಲಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಮರುಕ್ರಯಕ್ಕೆ ಕೇಳಿದ್ದಾಗ ನನ್ನ ತಂದೆಯವರು ಒಪ್ಪಿದ್ದು ಅನಾರೋಗ್ಯದ ಕಾರಣ ಮಾಡಿಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಮರಣಾನಂತರ ನನಗೆ ಮತ್ತು ನನ್ನ ಅಣ್ಣನಿಗೆ ಮರುಕ್ರಯಕ್ಕೆ ಒತ್ತಾಯಿಸಿದ್ದು ನಾನು ಸಹಕರಿಸದ ಕಾರಣ 1ನೇ ಪ್ರತಿವಾದಿಯು ಮರುಕ್ರಯ ಮಾಡಿದ್ದಾರೆ ಎಂದರೆ ಸರಿಯಲ್ಲ.

**4.** 29 ರಿಂದ 32ನೇ ಪ್ರತಿವಾದಿಗಳು ಹಾಗೂ ಅವರ ಪೂರ್ವಜರು ನನ್ನ ತಂದೆಯವರ ಬಳಿ ರೂ. 8,000/- ಸಾಲ ಪಡೆದು ಸದರಿ ಸಾಲದ ಭದ್ರತೆಗಾಗಿ ದಾವಾ ಐಟಂ ನಂ. 51 ರಿಂದ 61, ಎ ಷಡ್ಯೂಲ್‌ನನ್ನು ನಾಮಮಾತ್ರದ ಕ್ರಯಪತ್ರ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಸಾಲವನ್ನು ನನ್ನ ತಂದೆಯವರು ನನ್ನ ಮತ್ತು ನನ್ನ ಅಣ್ಣನ ಸಮಕ್ಷಮ 2000ನೇ ಸಾಲಿನಲ್ಲಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಮರುಕ್ರಯಕ್ಕೆ ಕೇಳಿದ್ದಾಗ ನನ್ನ ತಂದೆಯವರು ಒಪ್ಪಿದ್ದು ಅನಾರೋಗ್ಯದ ಕಾರಣ ಮಾಡಿಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಮರಣಾನಂತರ ನನಗೆ ಮತ್ತು ನನ್ನ ಅಣ್ಣನಿಗೆ ಮರುಕ್ರಯಕ್ಕೆ ಒತ್ತಾಯಿಸಿದ್ದು ನಾನು ಸಹಕರಿಸದ

ಕಾರಣ 1ನೇ ಪ್ರತಿವಾದಿಯು ದಿನಾಂಕ 05.07.2008 ರಂದು ದಾವಾ ಐಟಂ 51 ಮತ್ತು 52ನ್ನು 29ನೇ ಪ್ರತಿವಾದಿಗೆ ಹಾಗೂ ದಿನಾಂಕ 05.07.2008 ರಂದು ದಾವಾ ಐಟಂ ನಂ. 53 ರಿಂದ 55 ನ್ನು 30ನೇ ಪ್ರತಿವಾದಿಗೆ, ದಿನಾಂಕ 04.07.2008 ರಂದು ದಾವಾ ಐಟಂ ನಂ. 56 ರಿಂದ 58 ನ್ನು 31ನೇ ಪ್ರತಿವಾದಿಗೆ, ದಿನಾಂಕ 02.11.2011 ರಂದು ದಾವಾ ಐಟಂ ನಂ. 59 ಮತ್ತು 60 ನ್ನು 32ನೇ ಪ್ರತಿವಾದಿಗೆ, ದಿನಾಂಕ 05.07.2008 ರಂದು ದಾವಾ ಐಟಂ ನಂ. 61 ನ್ನು 29ನೇ ಪ್ರತಿವಾದಿಗೆ ಮರುಕ್ರಯ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ನನ್ನ ಸಂಪೂರ್ಣ ತಿಳುವಳಿಕೆಯಲ್ಲಿ ಇದೆ ಎಂದರೆ ಸರಿಯಲ್ಲ. ದಾವಾ ಐಟಂ 49 ರಿಂದ 61 ಈ ಪೂರ್ವದಲ್ಲಿ ಒಂದೇ ಸರ್ವೆ ನಂಬರ್ ಆಗಿದ್ದು ನಂತರದಲ್ಲಿ 27 ರಿಂದ 32ನೇ ಪ್ರತಿವಾದಿಗಳು ಭಾಗ ಮಾಡಿಕೊಂಡ ಕಾರಣ ಅನುಭವದ ಪ್ರಕಾರ 1ನೇ ಪ್ರತಿವಾದಿ ಮರುಕ್ರಯ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಸ್ವತ್ತುಗಳನ್ನು ನನ್ನ ತಂದೆ ಅಥವಾ ನಾವು ಯಾವತ್ತು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಈ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ಸ್ವತ್ತುಗಳು ಒಂದುವೇಳೆ ಕುಟುಂಬದ ಸ್ವತ್ತುಗಳು ಎಂದು ಕಂಡುಬಂದಲ್ಲಿ ಆ ಎಲ್ಲಾ ಸ್ವತ್ತುಗಳನ್ನು 1ನೇ ಪ್ರತಿವಾದಿಯ ಹಿಸ್ಸೆಗೆ ನೀಡಿದ್ದಲ್ಲಿ ಉಳಿಕೆ ಸ್ವತ್ತಿನಲ್ಲಿ ನನಗೆ ಹಿಸ್ಸೆ ನೀಡಿದ್ದಲ್ಲಿ ಯಾವುದೇ ನಷ್ಟ ಅಥವಾ ತೊಂದರೆ ನನಗೆ ಉಂಟಾಗುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನನ್ನು ಅಕ್ರಮವಾಗಿ ಕಬಳಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ._

ಮರುವಿಚಾರಣೆ ಇಲ್ಲ

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ,

**ಸಹಿ/-**

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.